11 a. m.

ಮನವಿಗಳು

ಶ್ರೀ ಭೀಮಣ್ಣ ಖಂಡ್ರೆ.-- ಸ್ವಾಮಿ, ನಾನು ಮೊನ್ನೆ ರೂಲ್ 334ರ ಕೆಳಗೆ ಸಕ್ಕರೆ ಕಾರ್ಖಾನೆಯ ಚುನಾವಣೆಗೆ ಸಂಬಂಧಪಟ್ಟಹಾಗೆ ಒಂದು ನೋಟೀಸ್ ಕೊಟ್ಟಿದ್ದೆ.

ಉಪಾಧ್ಯಕ್ಷರು.-- ತಾವು ರೂಲ್ 68ರ ಪ್ರಕಾರ ಕೊಟ್ಟಿದ್ದೀರಿ. ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.-- ಅದನ್ನು ಎಕ್ಸಾಮಿನ್ ಮಾಡಿ ಇವತ್ತು ತೆಗೆದುಕೊಳ್ಳುತ್ತೇನೆಂದು ಅಧ್ಯಕ್ಷರು ಹೇಳಿದ್ದರು.

ಉಪಾಧ್ಯಕ್ಷರು.-- ಅದು ಅಜೆಂಡಾದಲ್ಲಿ ಬರುತ್ತದೆ ; ಬಹುಶಃ ಅದನ್ನು ಅರ್ಧಗಂಟೆ ಚರ್ಚೆಗೆ ತೆಗೆದುಕೊಳ್ಳಬಹುದು. ಅಸೆಂಬ್ಲಿ ಈಗಲೇ ಏನು ಮುಗಿಯುವುದಿಲ್ಲ.

ಶ್ರೀ ಭೀಮಣ್ಣ ಖಂಡ್ರೆ.-- ನಾಳೆ ಅಸೆಂಬ್ಲಿ ಮುಕ್ತಾಯವಾಗುತ್ತಿದೆಯಲ್ಲವೆ ?

ಉಪಾಧ್ಯಕ್ಷರು.-- ಇಲ್ಲ. ಅಸೆಂಬ್ಲಿ ಮುಗಿಯುವುದರೊಳಗೆ ನಿಮ್ಮ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಹೆಚ್. ಡಿ. ಚೌಡಯ್ಯ.-- ನಮಗೆ ಒಂದು ಅನುಮಾನ ಬಂದಿದೆ. ಏನೆಂದರೆ ನಾಳೆಯ ಕಾರ್ಯಕ್ರಮ ಏನು ಎಂಬುದು ನಮಗೆ ಗೊತ್ತಿಲ್ಲ.

ಉಪಾಧ್ಯಕ್ಷರು.-- ನಾಳೆ ಸಭೆ ಇರುತ್ತದೆ ; ನಾಡಿದ್ದು ಇರುವುದಿಲ್ಲ ; ಮತ್ತೆ ಏಪ್ರಿಲ್ ತಿಂಗಳು ಇದೆಯಲ್ಲ.

ಶ್ರೀ ಭೀಮಣ್ಣ ಖಂಡ್ರೆ.-- ಇದನ್ನು ಪರಿಶೀಲನೆ ಮಾಡಿ, ಇದರ ಬಗ್ಗೆ ಚರ್ಚೆಮಾಡಲು ಇವತ್ತು ಅವಕಾಶ ಮಾಡಿಕೊಡುತ್ತೇನೆಂದು ಅಧ್ಯಕ್ಷರು ಭರವಸೆ ಕೊಟ್ಟಿದ್ದರು. ಆದರೆ ಇವತ್ತಿನ ಅಜೆಂಡಾದಲ್ಲಿ ಬರಲಿಲ್ಲ. ತಾವು ಕೂಡ ಈಗ ಎಕ್ಸಾಮಿನ್ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳುತ್ತಿದ್ದೀರಿ. ಆದ್ದರಿಂದ, ತಾವು ಕೊನೇಪಕ್ಷ ನಾಳೆಯಾದರೂ ಇದರ ಬಗ್ಗೆ ಚರ್ಚೆಮಾಡಲು ಅವಕಾಶ ಮಾಡಿಕೊಡುತ್ತೀರಾ ?

ಉಪಾಧ್ಯಕ್ಷರು.-- ಅಸೆಂಬ್ಲಿ ಮುಗಿಯುವುದರೊಳಗಾಗಿ ಖಂಡಿತವಾಗಿ ಚರ್ಚೆಮಾಡುವುದಕ್ಕೆ ಅವಕಾಶ ಮಾಡಿಕೊಡೋಣ.

ಶ್ರೀ ಭೀಮಣ್ಣ ಖಂಡ್ರೆ.-- ನಾಳೆಯೇ ಇದನ್ನು ಚರ್ಚಿಸಲು ಅವಕಾಶ ಮಾಡಿಕೊಡಬೇಕು.

ಡಾ। ವಿ. ಎಸ್. ಆಚಾರ್ಯ.-- ನಾನು ಮತ್ತು ಶ್ರೀ ಒಡೆಯರಾಜ್‌ರವರು ಸೇರಿ ಅಲ್ಪ ಕಾಲಾವಧಿ ಚರ್ಚೆ ಬಗ್ಗೆ ಒಂದು ಸೂಚನೆಯನ್ನು ಕಳುಹಿಸಿದ್ದೆವು ; ಅದು ಇವತ್ತಿನ ವಿಧಾನಸಭೆಯ ಕಾರ್ಯ ಕಲಾಪದಲ್ಲಿ ಬರಲಿಲ್ಲ. ರೂಲ್ 68ರಂತೆ ಗುಲ್ಬರ್ಗ ಜಿಲ್ಲೆಯಲ್ಲಿ.....

ಉಪಾಧ್ಯಕ್ಷರು.-- ಅದನ್ನು ಈಗ ತಾವು ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ. ಒಂದು ಸಾರಿ ನೀವು ಪ್ರಸ್ತಾಪ ಮಾಡಿದರೆ ಅದು ಹೊರಟುಹೋಗುತ್ತದೆ. ಆದ್ದರಿಂದ, ನೀವು ನನ್ನ ಛೇಂಬರಿಗೆ ಬನ್ನಿ, ನಾವು ಕುಳಿತು ತೀರ್ಮಾನ ಮಾಡೋಣ. ಇವತ್ತು ಪ್ರಸ್ತಾಪ ಮಾಡಿದರೆ ಮತ್ತೆ ನಾಳೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಡಾ। ವಿ. ಎಸ್. ಆಚಾರ್ಯ.-- ಇವತ್ತಿನ ಅಜೆಂಡಾದಲ್ಲಿ ಹಾಕುತ್ತೇವೆಂದು ತಿಳಿಸಿದ್ದರು. ಆದರೆ ಇವತ್ತು ಬಂದಿಲ್ಲ.

ಉಪಾಧ್ಯಕ್ಷರು.-- ನೀವು ರೂಲ್ 68ರ ಪ್ರಕಾರ ನೋಟೀಸ್ ಕೊಟ್ಟಿದ್ದೀರಿ. ಅದು ಒಂದೆರಡು ವಾರಗಳಲ್ಲಿ ಅಜೆಂಡಾದಲ್ಲಿ ಬರಬೇಕು. ತಾವು ಅದು ಬರುವವರೆಗೆ ಸ್ವಲ್ಪ ಕಾಯಬೇಕಾಗುತ್ತದೆ ಒಂದು ವೇಳೆ ನೀವು ಇವತ್ತು ರೈಸ್‌ಮಾಡಿದರೆ ಮತ್ತೆ ಅದನ್ನು ಅಜೆಂಡಾದಲ್ಲಿ ಸೇರಿಸುವುದಕ್ಕಾಗುವುದಿಲ್ಲ.

ಡಾ। ವಿ. ಎಸ್. ಆಚಾರ್ಯ.-- ನನ್ನ ತೊಂದರೆ ಏನೆಂದರೆ, ಇದು ಒಮ್ಮೆ ಅಜೆಂಡಾದಲ್ಲಿ ಬಂದಿತ್ತು ಆದರೆ ತೆಗೆದುಕೊಳ್ಳಲಿಲ್ಲ. ಅದು ಬಹಳ ತುರ್ತಾದ ವಿಚಾರ.

ಉಪಾಧ್ಯಕ್ಷರು.-- ಅಷ್ಟು ತುರ್ತಾಗಿರತಕ್ಕ ವಿಷಯವಾಗಿದ್ದರೆ ತಾವು ಬೇರೆ ರೂಲ್‌ನಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು. ತುರ್ತು ವಿಚಾರ ಎಂದರೆ ರೂಲ್ 68ರಲ್ಲಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ನೀವು ನನ್ನ ಛೇಂಬರಿಗೆ ಬನ್ನಿ, ವಿಚಾರ ಮಾಡೋಣ.

ಡಾ। ವಿ. ಎಸ್. ಆಚಾರ್ಯ.— ಅಧ್ಯಕ್ಷರ ಛೇಂಬರಿಗೆ ನಿನ್ನೆ ಹೋದಾಗ ಇವತ್ತು ಬರುತ್ತದೆಂದು ಹೇಳಿದ್ದರು. ಇವತ್ತೂ ಬರಲಿಲ್ಲ. ನಾಳೆಯೂ ಬರದಿದ್ದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ನಾಳೆ ಅಸೆಂಬ್ಲಿ ಮುಗಿಯುತ್ತದೆ. ಅಲ್ಲಿ ನಿರಪರಾಧಿಗಳು ಜೈಲಿನಲ್ಲಿದ್ದಾರೆ. ಅದಕ್ಕೋಸ್ಕರ ಸಿಒಡಿ. ತನಿಖೆ ಆಗಬೇಕು. ಆಳುವ ಪಕ್ಷದ ಒಬ್ಬರು ಸದಸ್ಯರು ಪೋಲೀಸರ ಮೇಲೆ ಒತ್ತಡ ತಂದಿದ್ದಾರೆ.

ಶ್ರೀ ಪಿ. ರಾಂದೇವ್.--ಆ ರೀತಿ ಆಪಾದನೆ ಮಾಡಬೇಕಾದರೆ ಮೊದಲೇ ನೋಟೀಸ್ ಕೊಡಬೇಕು.

ಡಾ। ವಿ. ಎಸ್. ಆಚಾರ್ಯ.-- ಅವರು ವಿಷಯ ಗೊತ್ತಿಲ್ಲದೆ ಮಾತನಾಡುತ್ತಿದ್ದಾರೆ.

ಉಪಾಧ್ಯಕ್ಷರು.-- ಅವರಿಗೆ ಅರ್ಥವಾಗಿಲ್ಲವೋ, ನಿಮಗೆ ಅರ್ಥವಾಗಿಲ್ಲವೋ ಗೊತ್ತಿಲ್ಲ; ನನಗಂತೂ ಅರ್ಥವಾಗಿಲ್ಲ.

ಡಾ। ವಿ. ಎಸ್. ಆಚಾರ್ಯ.-- ಅರ್ಥಮಾಡಿ ಹೇಳುವುದಕ್ಕೆ ಅವಕಾಶ ಕೊಡುತ್ತಿಲ್ಲವಲ್ಲ.

ಉಪಾಧ್ಯಕ್ಷರು.—ಆ ರೀತಿ ಅವಕಾಶ ಕೊಡುವುದಕ್ಕೆ ಬರುವುದಿಲ್ಲ. ಪ್ರಶ್ನೋತ್ತರ ಆದಮೇಲೆ ರೂಲ್ 334ಕ್ಕೆ ಸಂಬಂಧಪಟ್ಟ ವಿಚಾರಗಳನ್ನು ತೆಗೆದುಕೊಳ್ಳುತ್ತೇನೆ. ಆದರಲ್ಲಿ ರೂಲ್ 68 ಬೇಗೆ ಬರುತ್ತದೆ ? ಅದು ಆಜೆಂಡಾದಲ್ಲಿ ಬರಬೇಕಾಗುತ್ತದೆ : ಮತ್ತು ಅದು ಸಭೆ ಮುಕ್ತಾಯವಾಗುವುದಕ್ಕೆ ಒಂದು ಗಂಟೆ ಮುಂಚೆ ಪ್ರಸ್ತಾಪಕ್ಕೆ ಬರುತ್ತದೆ. ಅದನ್ನು 334ಕ್ಕೆ ಏತಕ್ಕೆ ಕನ್‌ವರ್ಟ್ ಮಾಡುತ್ತೀರಿ?

ಡಾ। ವಿ. ಎಸ್. ಆಚಾರ್ಯ.—ಇಲ್ಲ. ನಾನು ಇದನ್ನು ರೂಲ್ 68ರ ಪ್ರಕಾರ....

ಉಪಾಧ್ಯಕ್ಷರು.— ಆದಕ್ಕೋಸ್ಕರ ದಯವಿಟ್ಟು ನನ್ನ ಛೇಂಬರಿಗೆ ಬನ್ನಿ. ಎಷ್ಟು ಬೇಗ ಅದಕ್ಕೆ ಅವಕಾಶ ಮಾಡಿಕೊಡಬಹುದೋ ಅಷ್ಟು ಬೇಗ ಮಾಡಿಕೊಡುತ್ತೇನೆ.

ಶ್ರೀ ಬಿ. ದೊಡ್ಡಬೋರೇಗೌಡ.—25-3-84ರಂದು ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಸಾಗರದಲ್ಲಿ ರಾಜಕೀಯ ಪಕ್ಷದ ಸಮ್ಮೇಳನದ ವಿಷಯದಲ್ಲಿ ಭಾರೀ ಹೊಡೆದಾಟ ನಡೆದು ಕೆಲವು ಮಹಿಳೆಯರಿಗೆ ಪೆಟ್ಟು ಬಿದ್ದು ಗೊಂದಲದಲ್ಲಿ ಪರಿಸಮಾಪ್ತಿಯಾಗಿದ್ದ ವಿಷಯ ಆ ಭಾಗದ ಸಾರ್ವಜನಿಕರಿಗೆ ಭಂಗ ಉಂಟುಮಾಡಿದೆ. ರಾಜ್ಯದಲ್ಲಿ ನಡೆಯುವ ಸಾರ್ವಜನಿಕಸಭೆ, ಸಮಾರಂಭಗಳಲ್ಲಿ ಇಂಥ ಘಟನೆಗಳು ನಡೆಯದಂತೆ ಸರ್ಕಾರ ಸೂಕ್ತ ಮುಂಚಾಗರೂಕತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಇದರ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ಕೊಡಬೇಕು ಮತ್ತು ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಭರವಸೆ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಅದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ.

Sri M. Mahadev.-- Immediate steps to be taken to stop smuggling of serviceable bullocks, milch cows and calves and also slaughtering of cows illegally in the State as per instructions given by the Prime Minister of India.

ಶ್ರೀ ಎ. ಲಕ್ಷ್ಮೀಸಾಗರ್.-- ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಂ. ಮಹಾದೇವ್.— ಇದು ಬಹಳ ಸೀರಿಯಸ್ ವಿಚಾರ. ಒಳ್ಳೊಳ್ಳೆಯ ಹಸುಗಳು ಹೋಗುತ್ತಿವೆ. ದಿನಕ್ಕೆ ಸಾವಿರಾರು ದನಗಳನ್ನು ಕತ್ತರಿಸುತ್ತಿದ್ದಾರೆ. ಈ ರೀತಿ ಎಷ್ಟು ದಿನಗಳಿಂದ ಕತ್ತರಿಸುತ್ತಿದ್ದಾರೆ ? ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಬಹಳ ಹಗುರವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದರೆ ಏನು ಅರ್ಥ ? ನಾವು ಇದನ್ನು ಇನ್ನು ಯಾವ ರೀತಿ ಪ್ರಸ್ತಾಪ ಮಾಡಬೇಕು?

ಶ್ರೀ ಎ. ಲಕ್ಷ್ಮೀಸಾಗರ್.-- ಶ್ರೀ ಮಹಾದೇವ್ ಅವರು ಯಾವಾಗ ರುದ್ರಾವತಾರ ತಾಳುತ್ತಾರೆಂದು ಗೊತ್ತಿಲ್ಲ. ಒಂದು ಸಾರಿ ಸೌಮ್ಯವಾಗಿರುತ್ತಾರೆ ; ಒಂದು ಸಾರಿ ಸೌಜನ್ಯವಾಗಿರುತ್ತಾರೆ. ಆದರೆ ಒಂದೊಂದು ಸಾರಿ ರುದ್ರಾವತಾರ ತಾಳುತ್ತಾರೆ. ಅವರು ರುದ್ರಾವತಾರ ತಾಳಿದಾಗ ಸರಿಯಾದ ಉತ್ತರ ಹೇಳಿದರೂ ಅದು ಅವರ ಮನಸ್ಸಿಗೆ ಹೋಗುವುದಿಲ್ಲ. ಈ ರೀತಿ ಆಗುತ್ತಿದೆ, ಇದು ಕಾನೂನಿಗೆ ವಿರುದ್ಧವಾಗಿದೆ, ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆಂದು ಕೇಳಿದರು. ಅದಕ್ಕೆ ನಾನು ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇನೆಂದು ಹೇಳಿದ್ದೇನೆ. ಇದಕ್ಕಿಂತ ಪರಿಪೂರ್ಣವಾದ ಉತ್ತರ ನನ್ನಲ್ಲಿ ಇಲ್ಲ. ಎರಡನೆಯದಾಗಿ ಅಲ್ಲಿ ಏನೇನು ನಡೆಯುತ್ತಿದೆ ಎಂದು ಕೇಳಿದ್ದಾರೆ. ಈ ಬಗ್ಗೆ ನಾನು ವರದಿ ತರಿಸಿ ಪೂರ್ಣ ವಿಚಾರ ತಿಳಿಸುತ್ತೇನೆ.

ಹೊಸದುರ್ಗದಲ್ಲಿ ಸಿಮೆಂಟ್ ಕಾರ್ಖಾನೆಯಿಂದ ತೆಂಗಿನ ತೋಟಕ್ಕೆ ಆಗುವ ಹಾನಿ.

ಶ್ರೀ ಜಿ. ಬಸಪ್ಪ.-- ಸ್ವಾಮಿ, ಹೊಸದುರ್ಗ ತಾಲ್ಲೂಕಿನಲ್ಲಿ ಸುಮಾರು ಆರೇಳು ಸಿಮೆಂಟ್ ಫ್ಯಾಕ್ಟರಿಗಳನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರದವರು ಲೈಸೆನ್ಸ್ ಕೊಟ್ಟಿದ್ದಾರೆ. ಅದರ ಪರಿಣಾಮವಾಗಿ ಆದರ ಸುತ್ತಮುತ್ತ ಇರತಕ್ಕ ಮುತ್ತೋಡು ಮತ್ತು ಶ್ರೀರಾಂಪುರ ಹೋಬಳಿಯ ರೈತರಿಗೆ ಕಳವಳ ಉಂಟಾಗಿದೆ. ಆ ಸಿಮೆಂಟ್ ಫ್ಯಾಕ್ಟರಿಯಿಂದ ಆಗಿರತಕ್ಕ ಪರಿಣಾಮವನ್ನು ಕಂಡಿರತಕ್ಕವರಿಗೆ ನಮ್ಮ ಪರಿಸರವೂ ಹಾಳಾಗಿ ತೆಂಗಿನ ತೋಟಕ್ಕೆ ಲುಕ್ಸಾನಾಗುತ್ತದೆ ಎಂಬ ಕಳವಳ ಉಂಟಾಗಿದೆ. ಇದನ್ನು ತಡೆ